**ದಿನಾಂಕ:29.08.2024 ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

ನನಗೆ ಓದಲು-ಬರೆಯಲು ಬರುತ್ತದೆ. ರಾಣೇಬೆನ್ನೂರಿಗೆ ಹೋಗಬೇಕಾದರೆ ಬಸ್ ನಿಲ್ದಾಣದಲ್ಲಿ ಅಥವಾ ಕೆಇಬಿ ಕಡೆ ಬಸ್ ಹತ್ತಬೇಕು ಎಂದರೆ ಸರಿ. ಫೋನಿನಲ್ಲಿ ಯಾರು, ಯಾರಿಗೆ ಬೈಯುತ್ತಿದ್ದರು ಎಂದು ನನಗೆ ಮಾಹಿತಿ ಇಲ್ಲ. ನಾನು ಬಸ್ ನಿಲ್ದಾಣದಿಂದ ಸಂಜೆ 7.30 ಗಂಟೆಗೆ ಬಸ್ ಹತ್ತಿದೆ. ಕತ್ತಲಾದ್ದರಿಂದ ರಸ್ತೆಯಲ್ಲಿ ಯಾರು-ಯಾರು ಓಡಾಡುತ್ತಾರೆ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ.

ನಾನು ಹತ್ತಿದ ಬಸ್ ರಾಣೇಬೆನ್ನೂರಿಗೆ ಹೋಗುವ ಬಸ್. ಬಸ್ ನಲ್ಲಿ ಪ್ರಯಾಣ ಮಾಡುತ್ತಿದ್ದ ಬಗ್ಗೆ ಪೊಲೀಸರಿಗೆ ಟಿಕೆಟ್ ಕೊಟ್ಟಿಲ್ಲ. ನಾನು ಬಸ್ ನಲ್ಲಿ ಕಿಟಕಿಯ ಎಡಗಡೆ ಕುಳಿತಿದ್ದೆ. ರಾಣೇಬೆನ್ನೂರಿನ ಸೊಹೆಲ್ ಹತ್ತಿರ ಕೆಲಸ ಇತ್ತು ಅದಕ್ಕೆ ಹೋಗಿದ್ದೆ. ರಾಣೇಬೆನ್ನೂರಿಗೆ 8-8.30 ಗಂಟೆಗೆ ಹೋದೆ. ನಾನು ಮನೆಗೆ ಬಂದ ಮೇಲೆ ನಮ್ಮ ಅಣ್ಣ ಎಲ್ಲಿ ಹೋಗಿದ್ದಾನೆ ಅಂತಾ ವಿಚಾರಿಸಿದ್ದೇನೆ. ನಮ್ಮ ಅಣ್ಣನಿಗೆ ನಾನು ಫೋನ್ ಮಾಡಿಲ್ಲ. ಖಲಂದರ್ ಗೆ ಸಂಜೆ 7.30 ಗಂಟೆಗೆ ಫೋನ್ ಮಾಡಿದ್ದೆ.

ನಮ್ಮ ತಂದೆ, ತಾಯಿಗೆ ಅಣ್ಣ ಎಲ್ಲಿಗೆ ಹೋಗಿದ್ದಾನೆ ಅಂತಾ ಫೋನ್ ಮಾಡಿಲ್ಲ. ಚಾಸಾ-21-ಖಲಂದರ್ ಗೆ ನನಗೆ 10 ನಿಮಿಷ ಬಿಟ್ಟು ಫೋನ್ ಮಾಡಿದ್ದ. ಗಲಾಟೆಯಾಗಿದೆ ನಾನು ಇಳಿದು ಹೋಗಬೇಕು ಅಂತಾ ನಾನು ಬಸ್ ನವರಿಗೆ ಹೇಳಿಲ್ಲ. ರಾಣೇಬೆನ್ನೂರಿನಿಂದ ಬಂದ ನಂತರ ನಾನು ನನ್ನ ಸಹೋದರನನ್ನು ಭೇಟಿಯಾಗಿಲ್ಲ.

ಪೋಲಿಸರು ಕೊಟ್ಟಿರುವ ನೋಟೀಸಿನ ಮೇಲೆ ಮತ್ತು ಪಿರ್ಯಾದುವಿನ ಮೇಲಿರುವ ಸಹಿ ನನ್ನದೆ. ಎರಡೂ ಸಹಿಗಳು ಬೇರೆ-ಬೇರೆ ಇವೆ ಎಂದರೆ ಸರಿಯಲ್ಲ. ನಿಪಿ-1 ನ್ನು ನಾನು ಬರೆದಿಲ್ಲ. ನಾನು ಹೇಳಿರುವುದನ್ನು ವರುಣ ಆನವಟ್ಟಿ ಬರೆದಿದ್ದಾನೆ. ಪೊಲೀಸ್ ಠಾಣೆಗೆ ಆ ದಿನ

ಬೆಳಿಗ್ಗೆ 10.00 ಗಂಟೆಗೆ ಹೋಗಿದ್ದೆ. 3-4 ತಾಸು ಪೊಲೀಸ್ ಠಾಣೆಯಲ್ಲಿದ್ದೆ. ಪೊಲೀಸ್ ಠಾಣೆಗೆ ನಮ್ಮ ಕುಟುಂಬ ಸದಸ್ಯರೆಲ್ಲರೂ ಹೋಗಿದ್ದೆವು.

ರಾಣೇಬೆನ್ನೂರಿನಿಂದ ಬಂದ ನಂತರ ನಿಂಗಪ್ಪ ಎಲ್ಲಿದ್ದಾನೆ ಎಂದು ವಿಚಾರಿಸಿಲ್ಲ. ಅವನ ದೋಸ್ತರನ್ನೂ ವಿಚಾರಿಸಿಲ್ಲ. ಘಟನೆ ಜಾಗಕ್ಕೆ ನಾನು ಮೊದಲು ಹೋಗಿದ್ದೆ ನಂತರ ಪೊಲೀಸರು ಬಂದರು. ನಾನು ಘಟನೆ ಬಗ್ಗೆ ಹೇಳಿದೆ. ಪೊಲೀಸರು ಬರೆದುಕೊಂಡಿಲ್ಲ. ರಾಣೇಬೆನ್ನೂರು ರಸ್ತೆಯಲ್ಲಿ ಬಹಳಷ್ಟು ಜನಸಂಧಣಿ ಇರುತ್ತದೆ ಎಂದರೆ ಸರಿಯಲ್ಲ. ಬಸ್ ನ್ನು ಎಷ್ಟು ಕಿ.ಮೀ ವೇಗದಲ್ಲಿ ಓಡಿಸುತ್ತಿದ್ದ ಅಂತಾ ನಾನು ನೋಡಿಲ್ಲ.

ರಾಣೇಬೆನ್ನೂರಿನಲ್ಲಿರುವ ನನ್ನ ಸ್ನೇಹಿತರಿಗೆ ವಿಚಾರವನ್ನು ಹೇಳಿಲ್ಲ. ವರುಣ್ ಆನವಟ್ಟಿ ನನಗೆ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಆತ ಸಮಾಜಸೇವೆ ಮಾಡುತ್ತಾನೆ. ಅಲ್ಲಿಗೆ ಬಂದ ಪೊಲೀಸರ ಹೆಸರು ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ 4-5 ಬಾರಿ ಪೊಲೀಸ್ ಠಾಣೆಗೆ ಹೋಗಿದ್ದೇನೆ. ಪೊಲೀಸರು ಬಹಳಷ್ಟು ಸಹಿಗಳನ್ನು ತೆಗೆದುಕೊಂಡಿದ್ದಾರೆ. ಸಹಿ ಮಾಡಿಸಿಕೊಂಡ ದಾಖಲೆಯಲ್ಲಿ ಪೊಲೀಸರು ಏನು ಬರೆದುಕೊಂಡಿದ್ದಾರೆ ನೆನಪಿಲ್ಲ.

ನಾನು ಕೂಲಿ ಕೆಲಸ ಮಾಡುತ್ತೇನೆ. ನಮ್ಮ ಅಣ್ಣ ಮನೆ ಬಿಟ್ಟು ಹೋದ ನಂತರ ಯಾರ ಹತ್ತಿರ ಹೋಗುತ್ತಾನೆ, ಎಷ್ಟು ಕೂಲಿ ಕೆಲಸ ಮಾಡುತ್ತಾನೆ ಗೊತ್ತಿಲ್ಲ. ಎಷ್ಟು ಹಣ ತಂದೆ ಅಂತಾ ನಾನಾಗಲೀ, ನನ್ನ ತಂದೆ, ತಾಯಿಯಾಗಲೀ ಕೇಳಿಲ್ಲ. ನನ್ನ ಮೇಲೆ ಹಾವೇರಿ ಶಹರ ಠಾಣೆಯಲ್ಲಿ ಕ್ರೈಂ ನಂ.68/22 ಕೇಸು ಆಗಿದೆ ಎಂದರೆ ಸರಿ. ನನ್ನ ಅಣ್ಣನ ಮೇಲೆ ಹಾವೇರಿ ಶಹರ ಠಾಣೆಯಲ್ಲಿ ಕ್ರೈಂ ನಂ.262/16 ಕೇಸು ಆಗಿದೆ ಎಂದರೆ ಸರಿ. ನನ್ನ ಅಣ್ಣನ ಮೇಲೆ ರಾಣೇಬೆನ್ನೂರು ಶಹರ ಠಾಣೆಯಲ್ಲಿ ಕ್ರೈಂ ನಂ.157/14 ಕೇಸು ಆಗಿದೆ ಎಂದರೆ ಸರಿ. ಆ ಕೇಸಿನಲ್ಲಿ ನನ್ನ ಅಣ್ಣನಿಗೆ ಜೀವಾವಧಿ ಶಿಕ್ಷೆಯಾಗಿತ್ತು ಎಂದರೆ ಸರಿ. ಆ ಕೇಸಿನಲ್ಲಿ ನಮ್ಮ ಅಣ್ಣ ಜೈಲಿಗೆ ಹೋಗಿದ್ದ ಎಂದರೆ ಸರಿ.

ನಮ್ಮ ಅಣ್ಣನ ಮೇಲೆ ಬಹಳಷ್ಟು ಕೇಸುಗಳಾದ್ದರಿಂದ ವೈರಿಗಳು ಬಹಳಷ್ಟು ಜನ ಇದ್ದರು ಎಂದರೆ ಸರಿಯಲ್ಲ. ನಮ್ಮ ಅಣ್ಣನನ್ನು ರೌಡಿ ಶೀಟರ್ ಗೆ ಸೇರಿಸಿದ್ದರು ಎಂದರೆ ಸರಿಯಲ್ಲ. ನಮ್ಮ ಅಣ್ಣ ಬಹಳಷ್ಟು ಜನರ ವಿರೋಧ ಕಟ್ಟಿಕೊಂಡಿದ್ದ ಎಂದರೆ ಸರಿಯಲ್ಲ. ಬೇರೆ ಯಾರೋ ಮಾಡಿದ ಕೊಲೆಯನ್ನು ಆರೋಪಿತರ ಮೇಲೆ ಹೊರಿಸಿದ್ದೇವೆಂದರೆ ಸರಿಯಲ್ಲ. ಆರೋಪಿಗಳಿಗೂ ನಮ್ಮ ಅಣ್ಣನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಜೀವಾವಧಿ ಶಿಕ್ಷೆಯಾದ ಮೇಲೆ ನಮ್ಮ ಅಣ್ಣ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಅಣ್ಣ ಬಡ್ಡಿ ವ್ಯವಹಾರ ಮಾಡುತ್ತಿದ್ದ ಎಂದರೆ ಸರಿಯಲ್ಲ. ನಮ್ಮ ಅಣ್ಣ ಎಲ್ಲಿಗೆ ಹೋಗುತ್ತಿದ್ದ, ಏನು ಮಾಡುತ್ತಿದ್ದ, ಎಲ್ಲಿ ಮಲಗುತ್ತಿದ್ದ ಅಂತಾ ಗೊತ್ತಿಲ್ಲ. ನಮ್ಮ ಅಣ್ಣನಿಗೆ ಕುಡಿಯುವ ಚಟ ಇತ್ತು. ನಾನು ನಮ್ಮ ಅಣ್ಣನಿಗೆ ಹೊರಗೆ ಮಲಗಲು ಹೋಗಬೇಡಾ ಅಂತಾ ಹೇಳಿಲ್ಲ.

ನಿಪಿ-1, 3 ರಲ್ಲಿ ಏನು ಬರೆದಿದೆ ಅಂತಾ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-5 ರಿಂದ 10 ಪೋಟೋಗಳನ್ನು ಪೊಲೀಸರು ಕೇಸಿಗೆ ಅನುಕೂಲವಾಗುವಂತೆ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಮು.ಮಾ-1 ರಿಂದ 9 ಕ್ಕೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಚಾಸಾ-21-ಖಲಂದರ್ ಎಲ್ಲಿದ್ದ ಅಂತಾ ಗೊತ್ತಿಲ್ಲ. ಚಾಸಾ-10 ನನಗೆ ಪೋನ್ ಮಾಡಿಲ್ಲ, ಹೇಳಿಲ್ಲ ಎಂದರೆ ಸರಿಯಲ್ಲ. ಇದೇ ಮೊದಲ ಬಾರಿ ಮು.ಮಾ-1 ರಿಂದ 9 ನ್ನು ನೋಡಿದ್ದೇನೆ ಎಂದರೆ ಸರಿಯಲ್ಲ. ಯಾರೋ ನನ್ನ ಸಹೋದರನನ್ನು ಹೊಡೆದು ಕೊಲೆ ಮಾಡಿದ್ದಾರೆ ಅಂತಾ ದೂರು ನೀಡಿದ್ದೇನೆ. ಆರೋಪಿಗಳು ಅಲ್ಲಿ ಯಾವುದೇ ಬಾಡಿಗೆ ರೂಮನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

ಇದಕ್ಕಿಂತ ಮೊದಲು ಆರೋಪಿತರು ಮತ್ತು ನನ್ನ ಸಹೋದರನ ನಡುವೆ ಆದ ಜಗಳದ ಬಗ್ಗೆ ದೂರು ಕೊಟ್ಟಿಲ್ಲ. ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆ ಮಾಡಿಲ್ಲ ಎಂದರೆ

ಸರಿಯಲ್ಲ. ನನ್ನ ಸಹೋದರ ಮತ್ತು ಗಣೇಶನ ಮನೆ ಹಾವೇರಿಯ ವಿಜಯನಗರದಲ್ಲಿದೆ. ನಾನು ಸ್ಥಳಕ್ಕೆ ಹೋಗುವ ತನಕ ನನಗೆ ಯಾವುದೇ ಮಾಹಿತಿ ಇರಲಿಲ್ಲ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಗಣೇಶ ಮತ್ತು ನಮ್ಮ ಅಣ್ಣ ಬಾಡಿಗೆ ಮನೆಗೆ ಮಲಗಲು ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ ರಕ್ತ ಆಗಿತ್ತು ಅಂತಾ ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಯಾವುದೇ ವಸ್ತುವನ್ನು ಜಪ್ತು ಮಾಡಿಲ್ಲ, ಕಚ್ಚಾ ನಕಾಶೆ ಮತ್ತು ಪೊಟೋ ತೆಗೆದಿಲ್ಲ ಎಂದರೆ ಸರಿಯಲ್ಲ.

ಪೊಲೀಸರು ಶವ ಪಂಚನಾಮೆ ಮಾಡಿಲ್ಲ, ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ, ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ. ನಮ್ಮ ಅಣ್ಣನಿಗೆ ಬಹಣಷ್ಟು ಜನ ವೈರಿಗಳು ಇದ್ದರಿಂದ ಯಾರೋ ಮಾಡಿದ ಕೊಲೆಯನ್ನು ಆರೋಪಿತರ ಮೇಲೆ ಸುಳ್ಳು ಕೇಸು ಹಾಕಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.